ಸೆಲೆಬ್ರಿಟಿ

■ ಹನಿ

## ಅಧ್ಯಕ್ಷರ ಹೆಂಡತಿ



ಕಾರ್ಲಾ ಬ್ರೂನಿ ಕೂತರೂ ಸುದ್ದಿ– ನಿಂತರೂ ಸುದ್ದಿ. ಕಳೆದ ವಾರ 'ವ್ಯಾನಿಟಿ ಫೇರ್' ಮ್ಯಾಗಸಿನ್ 'ಜಗತ್ತಿನ ಅತ್ಯುತ್ತಮ ಡ್ರೆಸ್ ಮಾಡುವ ಮಹಿಳೆ' ಎಂಬ ಪ್ರಶಸ್ತಿಗೆ ಕಾರ್ಲಾ ಬ್ರೂನಿಯನ್ನು ಆಯ್ಕೆ ಮಾಡಿದೆ. ಬಾಲಿವುಡ್‌ನ ಹಲವು ನಟಿಯರನ್ನು ಹಿಂದಿಕ್ಕಿ ಈಕೆ ಈ ಪ್ರಶಸ್ತಿ ಗೆದ್ದಿದ್ದಾಳೆ. 93ರಲ್ಲಿ ಮೈಮೇಲೆ ಬಿಕಿನಿಯೂ ಇಲ್ಲದೆ ಪತ್ರಿಕೆಯೊಂದಕ್ಕೆ ಫೋಟೋ ಪೋಸ್ ನೀಡಿ, ಆ ಫೋಟೋಗಳನ್ನು ಆ ಬಳಿಕ ಪ್ರಕಟಿಸಿದವರೆಲ್ಲೆ ಮೇಲೆ ಕೇಸ್ ಹಾಕುತ್ತಿರುವ ಕಾರ್ಲಾ, ಈಗ ಮೈತುಂಬ ಬಟ್ಟೆ ತೊಟ್ಟು ಪ್ರಶಸ್ತಿ ಪಡೆದಿರುವುದು ತಮಾಷೆಯಾಗಿ ಕಾಣಿಸುತ್ತಿದೆ.

ಕಾರ್ಲಾ ಬ್ರೂನಿಗೆ (ಬರ್ತ್‌ಡೇ 23–12–67) ವಿವಾದವೂ ಹೊಸತಲ್ಲ; ಪ್ರಶಸ್ತಿಯೂ ಹೊಸತಲ್ಲ. 19ರ ಎಳವೆಯಲ್ಲಿ ಕಾಲೇಜಿಗೆ ಕೊನೇ ನಮಸ್ಕಾರ ಹಾಕಿ ಮಾಡೆಲಿಂಗ್‌ಗೆ ಜಿಗಿದವಳೀಕೆ. ತನ್ನ ಸ್ವಚ್ಛಂದ ಮತ್ತು ಐಶಾರಾಮಿ ಬದುಕಿನ ಶೈಲಿಯಿಂದ ಪದೇ ಪದೇ ಸುದ್ದಿ ಮಾಡಿದವಳು. '93ರಲ್ಲಿ ಈಕೆಯ ನಗ್ನಭಾವಚಿತ್ರ 91 ಸಾವಿರ ಡಾಲರ್‌ಗೆ ಮಾರಾಟವಾದದ್ದೇ ದೊಡ್ಡ ಸುದ್ದಿ. ಆ ಚಿತ್ರವನ್ನು ಬಳಸಿ ವ್ಯಾನಿಟಿ ಬ್ಯಾಗ್ ತಯಾರಿಸಿದ ಕಂಪೆನಿಯ ಮೇಲೆ ಕೇಸ್ ಹಾಕಿ ಲಕ್ಷಾಂತರ ಡಾಲರ್ ಪರಿಹಾರ ಪಡೆದ ಈಕೆ ಅದನ್ನು ಅನಾಥ ಮಕ್ಕಳ ಆಲಯಕ್ಕೆ ದೇಣಿಗೆಯಾಗಿ ನೀಡಿದ್ದಳು. 2008ರಲ್ಲಿ ಫ್ರಾನ್ಸ್‌ನ ಅಧ್ಯಕ್ಷ ಸರ್ಕೋಜಿಯನ್ನು ಮದುವೆಯಾಗಿ ಈಗಲೂ ಜತೆಗಿರುವ ಕಾರ್ಲಾ, ಅದಕ್ಕೂ ಮುನ್ನ ಎಂಟು ಗಂಡಂದಿರಿಗೆ ಸೋಡಾ ಚೀಟಿ ಕೊಟ್ಟಿದ್ದಾಳೆ. 'ಅದ್ಯಾಕೋ ನನಗೆ ಏಕಪತೀವ್ರತಳಾಗಿ ಇರುವುದು ಕಷ್ಟ. ಯಾವುದೇ ಸಂಬಂಧದಲ್ಲಿ ಪ್ರೀತಿ ಇದ್ದರೆ ಮಾತ್ರ ಅದು ಹೆಚ್ಚು ಕಾಲ ಬಾಳುತ್ತದೆ' ಎನ್ನುವುದು ಈಕೆಯ ಧ್ಯೇಯವಾಕ್ಯ.

ಈಕೆಯನ್ನು ಮದುವೆಯಾದ ಬಳಿಕ ಸರ್ಕೋಜಿ ಹಲವು ವಿವಾದಗಳನ್ನು ಸೃಷ್ಟಿಸಿದ್ದಾರೆ. ಕಳೆದ ತಿಂಗಳು ಸರ್ಕೋಜಿಯ ದುಬಾರಿ ಬೆಲೆಯ 'ಏರ್‌ಬಸ್ ಎ–330' ವಿಮಾನವನ್ನು ನವೀಕರಿಸಿದ್ದೂ ಸುದ್ದಿಯಾಯಿತು. 50 ದಶಲಕ್ಷ ಪೌಂಡ್ ಬೆಲೆಯ ಆ ವಿಮಾನದ ಡಬಲ್ ಬೆಡ್‌ರೂಮ್ ಮತ್ತು ಅಡುಗೆಮನೆಯನ್ನು ಶೃಂಗರಿಸಲು ಒಟ್ಟು 250 ದಶಲಕ್ಷ ಪೌಂಡ್ ಖರ್ಚಾಯಿತಂತೆ! ವಿಮಾನದ ಅಡುಗೆಮನೆಯಲ್ಲಿ ಗರ್ಭಿಣಿ ಪತ್ನಿ ಕಾರ್ಲಾಗೆ ಫ್ರೆಶ್ ಫ್ರೆಂಚ್ ಬ್ರೆಡ್ ತಯಾರಿಸಲು 65 ಸಾವಿರ ಪೌಂಡ್‌ನ ಓವನ್ ಒಂದನ್ನು ತರಿಸಿ ಜೋಡಿಸಲಾಯಿತು! ದೇಶ ತೀರಾ ಆರ್ಥಿಕ ಸಂಕಟದಲ್ಲಿ ಒದ್ದಾಡುತ್ತಿದ್ದರೆ ಅಧ್ಯಕ್ಷರ ಹೆಂಡತಿ, ಐಶಾರಾಮಿ ವಿಮಾನದ ಅಡುಗೆ ಮನೆಯಲ್ಲಿ ಬೇಯಿಸಿದ ಬಗೂಟೆ ತಿನ್ನುತ್ತಾ, ಸಿಗರೇಟ್, ಚಹಾ ಸೇವಿಸಿ ಆರಾಮವಾಗಿರುವುದು ವಿಪರ್ಯಾಸದ ಸುದ್ದಿಯೇ. ಇಟಲಿಯ ಜಗದ್ವಿಖ್ಯಾತ ಟೈರ್ ಕಂಪೆನಿ 'ಸೀಟ್'ನ ಮಾಲೀಕನ ಮೊಮ್ಮಗಳಾಗಿರುವ ಕಾರ್ಲಾ ಬ್ರೂನಿ, ಮುಂದಿನ ವಸಂತದಲ್ಲಿ ನಡೆಯುವ ಫ್ರಾನ್ಸ್ ಚುನಾವಣೆಯಲ್ಲಿ ಗಂಡನ ಸೀಟಿಗೇ ಸಂಚಕಾರ ಒಡ್ಡಲಿರುವ ಸುದ್ದಿಯಂತೂ ಈಗಾಗಲೇ ವಿಶ್ವದೆಲ್ಲೆಡೆ ಹಬ್ಬಿದೆ.

## ಶ್ರೀಮಂತ ನಟ



'ಟೈಟಾನಿಕ್' ಹಡಗು ಸಮುದ್ರದಲ್ಲಿ ಮುಳುಗಿ ನೂರು ವರ್ಷಗಳಾದವು. 'ಟೈಟಾನಿಕ್' ಎಂಬ ಹಾಲಿವುಡ್ ಸಿನಿಮಾ ಬಂದು 14 ವರ್ಷಗಳಾದವು. 14 ವರ್ಷಗಳ ಹಿಂದೆ ಆ ಸಿನಿಮಾದಲ್ಲಿ ನಾಯಕನಾಗಿ ಮಿಂಚಿ ಜಗತ್ತಿನಾದ್ಯಂತ ಖ್ಯಾತಿ ಹೊಂದಿದ ನಟ ಲಿಯೊನಾರ್ಡೊ ಡಿ ಕ್ಯಾಪ್ರಿಯೊ. ಇದೀಗ ಹಾಲಿವುಡ್‌ನ ಅತ್ಯಂತ ಶ್ರೀಮಂತ ನಟ ಎಂಬ ಬಿರುದಿಗೆ ಲಿಯೊನಾರ್ಡೊ ಪಾತ್ರನಾಗಿದ್ದಾನೆ. ಕಳೆದ ವರ್ಷ ಈತನ ಸಿನಿಮಾ ಆದಾಯ 77 ದಶಲಕ್ಷ ಡಾಲರ್ ಎಂದು ಖಚಿತವಾಗಿದೆ. ಈ ಮೂಲಕ ಆತ ಕಳೆದ ವರ್ಷದ ಶ್ರೀಮಂತ ನಟ (ಅಲಿಸ್ ದಿ ವಂಡರ್ ಲ್ಯಾಂಡ್ ಖ್ಯಾತಿಯ) ಜಾನಿ ಡೆಪ್‌ನನ್ನು ಎರಡನೆ ಸ್ಥಾನಕ್ಕೆ ದೂಡಿದ್ದಾನೆ. ಹಾಲಿವುಡ್‌ನ ಖ್ಯಾತನಾಮರಾದ ಆ್ಯಡಂ ಸ್ಯಾಂಡ್ಲರ್, ವಿಲ್ ಸ್ಮಿಥ್, ಟಾಮ್ ಹಾಕ್ಸ್, ಟಾಮ್ ಕ್ರೂಸ್ ಇವರೆಲ್ಲ ಗಳಿಕೆಯಲ್ಲಿ ಲಿಯೊನಾರ್ಡೊಗಿಂತ ಮೈಲು ಹಿಂದಿದ್ದಾರೆ.

ಕಳೆದ ವರ್ಷ ಲಿಯೊನಾರ್ಡೊ ನಟಿಸಿದ ಇನ್‌ಸೆಪ್ಶನ್ ಮತ್ತು ಶಟರ್ ಐಲ್ಯಾಂಡ್ ಸಿನಿಮಾಗಳು ಮಿಲಿಯಗಟ್ಟಳೆ ಡಾಲರ್ ದೋಚಿವೆ. ಹೀಗಾಗಿ ಈತನ ಸಂಭಾವನೆಯೂ ಈಗ ಮುಗಿಲು ಮುಟ್ಟಿದೆ. ಈತನ ಖ್ಯಾತಿ ಎಷ್ಟೊಂದು ಹಬ್ಬಿದೆ ಎಂದರೆ, ಹಾಲಿವುಡ್‌ನ ಗಾಸಿಪ್ ಗರ್ಲ್ ಎಂದೇ ಖ್ಯಾತಿವೆತ್ತ ಸುಂದರಿ ಬ್ಲೇಕ್ ಲೈವ್ಲೀ ಈತನನ್ನು ಈಗಲೇ ಮದುವೆಯಾಗಲು ಸಿದ್ಧ ಎಂದು ಘೋಷಿಸಿದ್ದಾಳೆ.

ಲಿಯೊನಾರ್ಡೊ (ಬರ್ತ್‌ಡೇ 11–11–74) ಈಗ ನಿರ್ಮಾಪಕನೂ ಹೌದು. ಗೋಲ್ಡನ್ ಗ್ಲೋಬ್, ಸಿಲ್ವರ್ ಬೇರ್ ಮುಂತಾಗಿ ಹಲವು ಪ್ರತಿಷ್ಠಿತ ಪ್ರಶಸ್ತಿಗಳನ್ನು ಈಗಾಗಲೆ ಗೆದ್ದುಕೊಂಡಿರುವ ಈತ 90ರ ದಶಕದ ಆರಂಭದಲ್ಲಿ ಟಿವಿ ಆ್ಯಡ್‌ಗಳಲ್ಲಿ ನಟಿಸುತ್ತಿದ್ದ. ಸಾಂಟಾ ಬಾರ್ಬರಾ ಮುಂತಾದ ಟಿವಿ ಧಾರವಾಹಿಗಳಲ್ಲಿ ನಟಿಸಿ ಮುಂದೆ ಬಂದ ಈತ ಸದ್ಯಕ್ಕೆ ಹಾಲಿವುಡ್‌ನ ಸೂಪರ್‌ಸ್ಟಾರ್.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65